ಯಷ್ಟು ಮುಳುಗಡೆಯಾಗುತ್ತದೆ. ಡ್ರೈಲ್ಯಾಂಡ್ ೫,೮೫೩ ಎಕರೆ ಮುಳುಗಡೆಯಾಗುತ್ತದೆ. ವೆಟ್‌ಲ್ಯಾಂಡ್ ೭೦೦-೮೦೦ ಎಕರೆ ಮುಳುಗಡೆಯಾಗುತ್ತದೆ. ಗಾರ್ಡನ್ ಲ್ಯಾಂಡ್ ೧,೨೪೧ ಎಕರೆ ಗಳಷ್ಟು ಮುಳುಗಡೆಯಾಗುತ್ತದೆ. ಕಾಫಿ ತೋಟ ೩೮ ಎಕರೆ, ಖಿರಾಬು ಲ್ಯಾಂಡ್ ೧೯೮ ಎಕರೆ ಮುಳುಗಡೆಯಾಗುತ್ತದೆ. ಮತ್ತೆ ಈ ಬಗ್ಗೆ ಇವೊತ್ತಿನ ದಿವಸ ಚರ್ಚೆ ಮಾಡಲಿಕ್ಕೆ ನಾನು ಹೋಗುವುದಿಲ್ಲ, ಇಷ್ಟು ವಾಕ್ಯ ಹೇಳುತ್ತೇನೆ. ಮೂಲತಿ ರಿಸರ್‌ವಾಯರ್ ಕಟ್ಟತಕ್ಕಂತಾದ್ದು, ಅದರಿಂದ ಪ್ರತ್ಯೇಕ ನೀರಾವರಿ ಮಾಡಲಿಕ್ಕೆ ಅಲ್ಲ.

೧೨-೦೦ ಮಧ್ಯಾಹ್ನ

ಸ್ಟೋರೇಜ್ ರಿಸರ್ವಾಯರನ್ನು ಕಟ್ಟಬೇಕೆಂಬ ಉದ್ದೇಶದಿಂದ ಈ ನೀರನ್ನು ಅಲ್ಲಿ ನಿಲ್ಲಿಸಿ ಕೊಂಡು ಅದರ ಕೆಳಗೆ ಇರತಕ್ಕ ಗಾಜನೂರು ಆಣೆಯಿಂದ ಹೈ ಲೆವೆಲ್ ಕೆನಾಲ್‌ನಿಂದ ಧಾರವಾಡ ಜಿಲ್ಲೆ ರಾಯಚೂರು ಜಿಲ್ಲೆ, ಶಿವಮೊಗ್ಗಾ ಜಿಲ್ಲೆಗೆ ನೀರನ್ನು ತರಬೇಕಾಗಿದೆ.—

ಶ್ರೀ ಪಟವಾಕ್ಕಿ ರತ್ನಾಕರ್.— ಮಾನ್ಯ ಅಧ್ಯಕ್ಷರೆ, ಈಗಲೇ ಇದನ್ನು ಚರ್ಚೆ ಮಾಡೋಣವೋ ಅಥವಾ ಕೊನೆಯಲ್ಲಿ ಚರ್ಚೆ ಮಾಡೋಣವೋ ?

ಅಧ್ಯಕ್ಷರು — ವಿವರಣೆಯನ್ನು ಕೇಳುವುದಾದರೆ ಕೇಳಿ. ನಿಮ್ಮದು ೯ನೇ ನಂಬರ್‌ದ್ದು. ಕೇಳುವುದಾದರೆ ಕೇಳಿ. ನಿಮ್ಮದು ಮುಗಿಯಲಿ...

ಶ್ರೀ ಧರ್ಮಸಿಂಗ್.— ಏನು ಸ್ವಾಮಿ ಇದು. ನಾವು ೨ ತಾಸಿನಿಂದ ಇಲ್ಲಿ ಕೂತಿದ್ದೇವೆ. ನಮ್ಮದನ್ನು ತೆಗೆದುಕೊಳ್ಳುವುದನ್ನು ಬಿಟ್ಟು ಅವರದನ್ನು ತೆಗೆದುಕೊಂಡು ಈಗಲೇ ಕೇಳಿ ಎಂದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.— ದೇವೇಗೌಡರೆ, ಅವರಿಗೆ ಡಿಸ್ಪರ್ಟ್ ಮಾಡುವುದು ಬೇಡ. ಅವರದ್ದು ೯ನೇ ನಂಬರ್‌ದು...

ಶ್ರೀ.ಹೆಚ್. ಡಿ. ದೇವೇಗೌಡ.— ಎರಡೂ ಕಂಬೈನ್ಡ್ ಇದ್ದುದರಿಂದ ನಾನು ಹೇಳಿದೆ.

ಅಧ್ಯಕ್ಷರು.— ಹೋಗಲಿ, ಧರ್ಮಸಿಂಗ್‌ರವರೇ ನಿಮ್ಮದನ್ನೇ ಕೇಳಿ.

ಶ್ರೀ ಧರ್ಮಸಿಂಗ್.— ಮಾನ್ಯ ಅಧ್ಯಕ್ಷರೆ, ಭೀಮಾ ನದಿಯಲ್ಲಿ, ಉಜ್ಜನಿ ಡ್ಯಾಂನಲ್ಲಿ ನೀರು ಜಾಸ್ತಿಯಾಗಿದೆ. ಇದರಿಂದ ಉಂಟಾಗಿರುವ ಅಪಾರ ಹಾನಿಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಮೊಟ್ಟಮೊದಲನೆಯದಾಗಿ ಹೇಳುವುದಾದರೆ ೬ನೇ ತಾರೀಖು ಈ ಕಾಲಿಂಗ್ ಅಟೆನ್‌ಷನ್ ಬಂದಿತ್ತು. ಆಗ ಮಾನ್ಯ ಲೋಕೋಪಯೋಗಿ ಖಾತೆಯ ಮಂತ್ರಿಗಳು ಇದಕ್ಕೆ ವಿವರವನ್ನು ತರಿಸಿ ಕೊಡುತ್ತೇನೆಂದು ಹೇಳಿದರು, ಅನಂತರ ಆರ್. ಡಿ. ಪಿ. ಮಂತ್ರಿಗಳು ಉತ್ತರ ಕೊಡುತ್ತಾರೆಂದು ಹೇಳಿದರು.

ಅಧ್ಯಕ್ಷರು.— ಮೊದಲು ನೀವು ಸರ್ಕಾರದ ಗಮನವನ್ನು ಸೆಳೆಯಿರಿ.

೪ ಕೊಯ್ನಾ ಹಾಗೂ ಉಜ್ಜನಿ ಅಣೆಕಟ್ಟುಗಳಿಂದ ಹೊರಬಿಡುತ್ತಿರುವ ಹೆಚ್ಚುವರಿ ನೀರಿನಿಂದ ಭೀಮಾ ನದಿಯಲ್ಲಿ ಮಹಾಪೂರವುಂಟಾಗಿರುವುದು.

ಶ್ರೀ ಧರ್ಮಸಿಂಗ್.— ಮಾನ್ಯ ಅಧ್ಯಕ್ಷರೆ, ಕೊಯ್ನಾ ಹಾಗೂ ಉಜ್ಜನಿ ಅಣೆಕಟ್ಟುಗಳಿಂದ ಹೊರ ಬಿಡುತ್ತಿರುವ ಹೆಚ್ಚುವರಿ ನೀರಿನಿಂದ ಭೀಮಾ ನದಿಯಲ್ಲಿ ಮಹಾಪೂರವುಂಟಾಗಿ ಗುಲ್ಬರ್ಗಾ ಜಿಲ್ಲೆಯ ಭೀಮಾ ನದಿಯ ಕೆಳದಂಡೆ ಅದರಲ್ಲೂ ಮುಖ್ಯವಾಗಿ ಜೇವರ್ಗಿ ತಾಲೂಕಿನಲ್ಲಿ ವಾಸಿಸುತ್ತಿರುವ ರೈತರ ಆಸ್ತಿಪಾಸ್ತಿ ಹಾಗೂ ಜೀವಕ್ಕೆ ಉಂಟಾದ ಅಪಾರ ಹಾನಿಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ (ಮುಖ್ಯಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಕೊಯ್ನಾ ಹಾಗೂ ಉಜ್ಜನಿ ಆಣೆಕಟ್ಟುಗಳಿಂದ ಹೊರಬರುತ್ತಿರುವ ನೀರಿನಿಂದ ಭೀಮಾ ನದಿಯಲ್ಲಿನ ನೀರಿನ ಮಟ್ಟ ಅಪಾಯದ ಗಡಿಯನ್ನು ಇಲ್ಲಿಯವರೆಗೆ ದಾಟಿರುವುದಿಲ್ಲ. ಈ ಭೀಮಾ ನದಿಯಲ್ಲಿ ಯಾವುದೇ ಮಹಾಪೂರ ಉಂಟಾಗಿರಲಿಲ್ಲ. ಗುಲ್ಬರ್ಗಾ ಜಿಲ್ಲೆಯ ಭೀಮಾ ನದಿಯ ಕೆಳದಂಡೆ ಆದರಲ್ಲೂ ಮುಖ್ಯವಾಗಿ ಜೇವರ್ಗಿ ತಾಲ್ಲೂಕಿನಲ್ಲಿ ವಾಸಿಸುತ್ತಿರುವ ರೈತರ ಆಸ್ತಿ-ಪಾಸ್ತಿ ಹಾಗೂ ಜೀವಕ್ಕೆ ಯಾವುದೇ ಧಕ್ಕೆ ಆಗಿರುವುದಿಲ್ಲ. ಈ ಪರಿಸ್ಥಿತಿಯು ಪ್ರತಿವರ್ಷವೂ ಉದ್ಭವಿಸುತ್ತಿದ್ದು ಈ ಭಾಗದ ಕೆಲವು ಹಳ್ಳಿಗಳನ್ನು ಸ್ಥಳಾಂತರಿಸಬೇಕಾಗುತ್ತದೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ನಾನು ೧೬ ವರ್ಷದಿಂದ ಆ ಕ್ಷೇತ್ರದಿಂದ ಆರಿಸಿ ಬರುತ್ತಿದ್ದೇನೆ. ನಾನು ಬೆಂಗಳೂರಿನಲ್ಲಿ ಇಲ್ಲ. ಅಲ್ಲಿಯೇ ಇದ್ದೇನೆ. ಮಾನ್ಯ ಮಂತ್ರಿಗಳು ಈ ರೀತಿಯ ಉತ್ತರವನ್ನು ಕೊಟ್ಟರೆ ನನಗೆ ದುಃಖ ಬರುತ್ತದೆ.

ಎರಡನೆಯದಾಗಿ ಹೇಳುವುದಾದರೆ ಪ್ರಜಾವಾಣಿ ಪತ್ರಿಕೆಯ ಮುಂಖ ಪುಟದಲ್ಲಿ ಬಂದಿದೆ, ಏನೆಂದರೆ, ಭೀಮಾ ನದಿಯ ರೆಡ್ ಮಾರ್ಕ್ ೪೮೫ ಮೀಟರ್‌ಗೆ ಇರತಕ್ಕದ್ದು. ಅದುಳಿಳ.೧೮ ಮೀಟರ್‌ಗೆ ಬಂದು ಮುಟ್ಟಿತ್ತು ಎಂದು, ಇದರ ಬಗ್ಗೆ ಅಲ್ಲಿಯ ಜಿಲ್ಲಾಧಿಕಾರಿಯವರೂ ಕೂಡ ಹೇಳಿದ್ದಾರೆ. ನಾನು ೮, ೯, ೧೦, ೧೧ನೇ ತಾರೀಖು ಅಲ್ಲಿದ್ದಾಗಜೇವರ್ಗಿ ತಾಲ್ಲೂಕಿನಲ್ಲಿರತಕ್ಕ ೩೨ ಹಳ್ಳಿಗಳು ಮುಳುಗಿ ಹೋಗಿವೆ. ನಾನು ಜೇವರ್ಗಿ ತಾಲೂಕಿನ ತಹಸೀಲ್ದಾರ್‌ರವರ ಜೊತ ಸಮಾಲೋಚನೆ ಮಾಡಿದಾಗ ೬೭ ಸಾವಿರ ಎಕರೆ ಕ್ಯಾಪ್ ಡ್ಯಾಮೇಜ್ ಆಗಿದ್ದು ಅದರಲ್ಲಿ ಈ ಹೊಳೆಯ ಪ್ರವಾಹದಿಂದಾಗಿ ೨೦ ಸಾವಿರ ಎಕರೆ ಜಾಮೀನಿನಲ್ಲಿರತಕ್ಕ ಕ್ರಾಪ್ ಡ್ಯಾಮೇಜ್ ಆಗಿದೆ. ಕೇವಲ್ಲ ಅಲ್ಲಿ ಮಾತ್ರವಲ್ಲ, ಆಫ್ಜಲಪುರ, ಶಹಬಾದ್‌ನಲ್ಲಿ, ಯಾದ್ಗೀರ್ ತಾಲೂಕಿನಲ್ಲಿ ಕೂಡ ಆಗಿದೆ ಮಂತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಸುಮಾರು ೧.೨೫ ಲಕ್ಷ ಎಕರೆಗಿಂತ ಹೆಚ್ಚಿಗೆ ಈ ಮಹಾ ಪೂರದಿಂದ ಕ್ರಾಪ್ ಡ್ಯಾಮೇಜ್ ಆಗಿದೆ. ಈಗ ಈ ರೇನ್ ಫಾಲ್‌ನಿಂದ ಅಲ್ಲೆಲ್ಲಾ ಬಹಳ ಭೀಕರ ಪರಿಸ್ಥಿತಿ ಉಂಟಾಗಿದೆ. ಉಜ್ಜನಿ ಆಣೆಕಟ್ಟಿನಿಂದ ಹೆಚ್ಚುವರಿ ನೀರನ್ನು ಬಿಟ್ಟಾಗ ಇನ್ನೂ ಹೆಚ್ಚಿಗೆ ನೀರು ಬಂದಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ? ನಾನು ೬ನೇ ತಾ॥ ಕಾಲಿಂಗ್ ಅಟೆನ್‌ಷನನ್ನು ಕೊಟ್ಟಿದ್ದು, ಮೊನ್ನೆ ನಾನು ಊರಿಗೆ ಹೋಗಿದ್ದಾಗ ಹೊಳೆಯ ಪ್ರವಾಹ ಇಳಿದಿದೆ. ಈಗ ಡೇಂಜರ್ ಏನೂ ಇಲ್ಲ. ಆದರೆ ಈಗ ಹೊಳೆಯ ದಂಡೆ ಪ್ರದೇಶದಲ್ಲಿರತಕ್ಕ ಜಮೀನೆಲ್ಲಾ ಮುಳುಗಡೆಯಾಗಿ ರೈತರಿಗೆ ಬಹಳ ತೊಂದರೆಯಾಗಿದೆ. ಸುಮಾರು ೧೫೦೦ ಮನೆಗಳು ಬಿದ್ದಿವೆ. ಈ ಬಗ್ಗೆ ಈಗಾಗಲೇ ರಿಪ್ಪೋರ್ಟ್ ಕೊಟ್ಟಿರುತ್ತಾರೆ. ತಹಶೀಲ್ದಾರರು ತಮ್ಮ ಸ್ವಂತ ಬರವಣಿಗೆಯಿಂದ ಬರೆದಿರುವ ರಿಪ್ಪೋರ್ಟ್‌ನ್ನು ಕಳುಹಿಸಿಕೊಟ್ಟಿದ್ದಾರೆ. ನನಗೆ ಏನು ದುಃಖವಾಗುತ್ತದೆಂದರೆ ಕಾಲಿಂಗ್ ಅಟೆಂಕ್ಷನ್ ಯಾರಾದರು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಾಗ ಅಧ್ಯಕ್ಷರೇ ಸರ್ಕಾರದ ಕರ್ತವ್ಯವೇನೆಂದರೆ, ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಏನು ಪರಿಸ್ಥಿತಿ ಇದೆ ಎನ್ನುವುದನ್ನು ಸರ್ಕಾರದವರು ಹೇಳದಹೋದರೆ ನಾವು ಏನು ತಮಾಷೆಗೆ ಕೇಳುತ್ತೇವೆಯೇ ? ನನ್ನ ತಾಲೂಕ್ಕಿನಲ್ಲಿರತಕ್ಕಂಥ ೩೨ ಹಳ್ಳಿಗಳ ಎಲ್ಲ ಜಮೀನುಗಳು ನೀರಿನಿಂದ ಮುಳುಗಿಹೋಗಿವೆ, ಆಫ್ಜಲ್‌ಪುರ ತಾಲ್ಲೂಕು ಮುಳುಗಿಂದಾಗಿ ಅಲ್ಲಿ ಸಾಕಷ್ಟು ಗಂಭೀರವಾದ ಪರಿಸ್ಥಿತಿ ಉದ್ಭವವಾಗಿದೆ. ಹೀಗಿದ್ದರೂ ಇಲ್ಲಿಯವರೆಗೆ ಒಂದು ಪೈಸೆಯನ್ನೂ ಕೂಡ ಬಿಡುಗಡೆಮಾಡಿಲ್ಲ. ಆದ್ದರಿಂದ ಈರೀತಿ ಉತ್ತರವನ್ನು ಕೊಡುವುದು ಸರಿಯಲ್ಲ ಇದು ಕ್ಷಷ್ಟವಾದ ಉತ್ತರವಲ್ಲ. ಪ್ರಾಮಾಣಿಕವಾಗಿ ಮಾನ್ಯ ಮಂತ್ರಿಗಳು ಸಂವಿಧಾನಬದ್ಧವಾಗಿ ವಿವರಣೆಗಳನ್ನು ಕೊಡಬೇಕು. ನಾನೂ ಕೂಡ ಮಂತ್ರಿಯಾಗಿ ಕೆಲಸ ಮಾಡಿರುತ್ತೇನೆ. ಮಾನ್ಯ ಸಚಿವರು ಗವಾಸ ಸೆಳೆಯುವ ಸೂಚನೆಗೆ ಈ ರೀತಿ ಉತ್ತರವನ್ನು ಕೊಡತಕ್ಕಂಥದ್ದು ಸರಿಯಲ್ಲ. ಜನರ ಮನಸ್ಸಿಗೆ ಹಿಡಿಯುವಂತೆ ಉತ್ತರವನ್ನು ಕೊಡಬೇಕು. ಸರ್ಕಾರದ ಕಾರ್ಯಕ್ರಮಗಳು ಜನರಿಗೆ ಹಿಡಿಯುವಂತೆ ಉತ್ತರವನ್ನು ಕೊಡಬೇಕು. ಕುಡಿಯಲಿಕ್ಕೆ ನೀರನ್ನು ಕೊಟ್ಟಿಲ್ಲ. ಉಜ್ಜನಿ ಆಣೆಕಟ್ಟಿನಿಂದ ಬರುತ್ತಿರುವ ಹೆಚ್ಚುವರಿ ನೀರಿನಿಂದಾಗಿ ಹಳ್ಳಿಗಳ ಮುಳುಗಡೆಯಾಗಿದೆ ಎಂದು ಹೇಳಿದ್ದಕ್ಕೆ ಮಾನ್ಯ ದೇವೇಗೌಡರು ಏನು ಹೇಳಿದರು ಎಂದರೆ, ಮಹಾರಾಷ್ಟ್ರಕ್ಕೆ ಇದು ಸಂಬಂಧಿಸಿದ್ದಾಗಿದೆ, ಇದರ ಬಗ್ಗೆ ಅವರೊಡನೆ ಸಮಾಲೋಚನೆ ಮಾಡುತ್ತೇವೆನ್ನುವ ಮಾತನ್ನು ಹೇಳಿದರು. ಮಹಾರಾಷ್ಟ್ರ ಸರ್ಕಾರದವರು ಹೆಚ್ಚಿನೀರನ್ನು ಬಿಡುತ್ತಿರುವುದರ ಬಗ್ಗೆ ತಿಳಿಸಬೇಕಾಗಿತ್ತು. ನಮ್ಮ ಪಿ.ಡಬ್ಲ್ಯೂ.ಡಿ. ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ಕೂಡ ಇನ್‌ಸ್ಟ್ರಕ್ಷನ್ ಕೊಟ್ಟಿಲ್ಲ. ಕಂದಾಯ

ಇಲಾಖೆಯವರೂ ಕೂಡ ಏನು ಕ್ರಮ ತೆಗೆದುಕೊಳ್ಳಲಿಲ್ಲ. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಸರ್ಕಾರದವರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಕೊಡುತ್ತಿದ್ದೇನೆ. ಇಲ್ಲಿ ಪ್ರಶ್ನೆ ಏನು ಉದ್ಭವವಾಗಿದೆ ಎಂದರೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಅಧ್ಯಕ್ಷರೇ ಭೀಮಾ ನದಿಯ ಹೆಚ್ಚುವರಿ ನೀರು ಏನು ಇದೆ ಅದನ್ನು ಉಜ್ಜನಿ ಡ್ಯಾಮ್‌ಗೆ ಬಿಟ್ಟ ಕಾರಣದಿಂದಾಗಿ ಜಮೀನುಗಳು ಮುಳುಗಡೆಯಾಗಿದೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಯಾವಾಗಲೂ ಆಗಂತ್ತಿದ್ದಂಥ ಪರಿಸ್ಥಿತಿ ಇದಲ್ಲವೆಂದು ನಾನು ಹೇಳುತ್ತಿದ್ದೇನೆ.

SRI R. V. DESHPANDE.—The notice given is about the havoc caused due to the increased floods in the Bheema River due to the letting of water from Koyna and Ujjani dams and the consequential loss to the lives and property. ಮಾನ್ಯ ಅಧ್ಯಕ್ಷರೇ ಇಲ್ಲಿ ನಾನು ಹೇಳುವುದೇನೆಂದರೆ ಈವತ್ತು ಮಹಾಪೂರ ಬಂದಿಲ್ಲವೆಂದು ಹೇಳಿದ್ದೇನೆ. ಯಾವುದೇ ಜೀವಕ್ಕೂ ಕೂಡಲಿ ಪ್ರಾಯವಾಗಿಲ್ಲವೆಂದು ಹೇಳಿದ್ದೇನೆ. ಆದರೆ ಅಗ್ರಿಕಲ್ಚರ್ ಲಾಸ್ ಆಗಲಿ, ಮನೆಗಳು ಮುಳುಗುವಕಾರಣ ಉಂಟಾಗಿರುವ ಲಾಸ್ ಆಗಲಿ ಅದರ ಬಗ್ಗೆ ಈಗಾಗಲೇ ಗೌರ್ನಮೆಂಟ್ ಆಫ್ ಇಂಡಿಯಾದವರಿಗೆ ಮೆಮೊರಂಡಮ್ ಕೊಟ್ಟಿದ್ದೇವೆ. ಗುಲ್ಬರ್ಗಾ ವಿಭಾಗದ ಅಗ್ರಿಕಲ್ಚರ್ ಲ್ಯಾಂಡ್‌ಗಳಿಗೆ ಸಾಕಷ್ಟು ಎಫೆಕ್ಟ್ ಆಗಿರುವ ಬಗ್ಗೆ ನಾವು ಒಪ್ಪಿಕೊಂಡಿದ್ದೇವೆ. ಮತ್ತೆ ಬಹಳಷ್ಟು ಮನೆಗಳು ಬಿದ್ದಿರುವ ಬಗ್ಗೆಯೂ ಹೇಳಿದ್ದೇವೆ. ಗಮನಸೆಳೆಯುವ ಸೂಚನೆಯಲ್ಲಿರುವಂತೆ ಮಹಾಪೂರ ಬಂದಿದೆ. ಮಹಾಪೂರ ಬಂದಿಲ್ಲವೆಂದು ಹೇಳಿಲ್ಲ ಆದರೆ ಇದರಿಂದಾಗಿ ಯಾರ ಜೀವಕ್ಕೂ ತೊಂದರೆಯಾಗಿಲ್ಲ. ಅಗ್ರಿಕಲ್ಚರಲ್ ಕ್ರಾಪ್ಸ್‌ಗೆ ತೊಂದರೆಯಾಗಿರುವುದಂತೂ ನಿಜ. ಆದರ ಬಗ್ಗೆ ಆನೆಸ್ ಮಾಡಲಿಕ್ಕೆ ಹೇಳಿದ್ದು ವರದಿ ಬಂದಿದೆ. ಲಕ್ಷಾಂತರ ರೂಪಾಯಿಗಳ ಬೆಳೆ ಲಾಸ್‌ಆಗಿರುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮೆಮೊರಂಡಮ್ ಕೊಟ್ಟಿದ್ದೇವೆ. ಮತ್ತೆ ಈ ಮಹಾಪೂರದಿಂದಾಗಿ ಕೆಲವು ಹಳ್ಳಿಗಳನ್ನು ಸ್ಥಳಾಂತರ ಮಾಡಬೇಕಾಗಿದೆ. ಇಷ್ಟು ಸರ್ಕಾರದವತಿಯಿಂದ ಹೇಳುತ್ತೇನೆ.

ಶ್ರೀ ಕೆ. ಬಿ. ಶಾನಪ್ಪ. (ಷಹಾಬಾದ್).—ಮಾನ್ಯ ಅಧ್ಯಕ್ಷರೇ ಭೀಮಾನದಿ ಸುತ್ತಮುತ್ತ ಸುಮಾರು ೨೦ ವರ್ಷಗಳ ಹಿಂದೆ ಆಗಿದ್ದಂತಹ ಮಳೆ ಈಗ ಆಗಿರುತ್ತದೆ. ೧೨೦ ದಿವಸಗಳಕಾಲ ಸತತವಾಗಿ ಮಳೆಯಾಗಿದೆ. ಮಹಾರಾಷ್ಟ್ರದವರು ಕೊಯಿನ ನೀರನ್ನು ನಮ್ಮ ರಾಜ್ಯದ ಭೀಮಾನದಿಯ ಮೂಲಕ ಬಿಡುತ್ತಿರುವುದರಿಂದ ಡೇಂಜರ್ ಫಾರಮ್ ಆಗಿದೆ. ಈ ವಿಚಾರ ಪತ್ರಿಕೆಗಳಲ್ಲಿ ಬಂದಿರುತ್ತದೆ. ಶಹಾಪುರ ತಾಲ್ಲೂಕಿನ ಕೆಲವು ಹಳ್ಳಿಗಳು ಆಫ್ಜಲ್‌ಪುರದ ಹಲವಾರು ಹಳ್ಳಿಗಳು ಸುತ್ತಲೂ ನೀರಿನಿಂದ ಆವೃತ್ತವಾಗಿರುವ ಬಗ್ಗೆ ರಿಪೋರ್ಟ್ ಬಂದಿದೆ. ಸಾವಿರಾರು ಎಕರೆ ಜಮೀನು ಪೂರಾ ಹಾಳಾಗಿ ತೊಗರಿ ಬೆಳೆಎಲ್ಲ ನಾಶವಾಗಿದೆ. ಅನೇಕ ಜನರ ಮನೆಗಳು ಬಿದ್ದುಹೋಗಿವೆ. ಸರ್ಕಾರಕ್ಕೆ ಜಿಲ್ಲಾಪರಿಷತ್ ನವರು ಸರ್‌ಕ್ಯೂಲರ್. ಹೊರಡಿಸಿ ಏನೇನು ಲಾಸ್ ಆಗಿದೆ ಎನ್ನುವ ಬಗ್ಗೆ ಸರ್ವೆಮಾಡಿ ರಿಪೋರ್ಟ್ ಕಳುಹಿಸಿ ಕೊಟ್ಟಿದ್ದಾರೆ ಆದರಲ್ಲಿ ಲಾಸ್ ಆಗಿಲ್ಲ, ಮನೆಗಳು ಬಿದ್ದಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಆರ್ ವಿ. ದೇಶಪಾಂಡೆ.—ನಾವು ವಾಟರ್ ಲೆಟ್ಟಿಟ್ ಮಾಡಿದ್ದರಿಂದ ಹಾನಿಯಾಗಿದೆ ಎಂದು ಹೇಳುತ್ತಿದ್ದಾರೆ, ಆದರೆ ಅದರಿಂದ ಆಗಿಲ್ಲ. ಅಲ್ಲಿ ಹೆವಿ ರೈನ್ಸ್ ಆಗಿದೆ. ಅಗ್ರಿಕಲ್ಚರಲ್ ಕ್ರಾಪ್ಸ್‌ಗೆ ಡ್ಯಾಮೇಜ್ ಆಗಿದೆ. ಮನೆಗಳು ಬಿದ್ದಿವೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮೆಮೋರ್ಯಾಂಡಂ ಅನ್ನು ಸಬ್‌ಮಿಟ್ ಮಾಡಿದ್ದೇವೆ. ಅಷ್ಟೇ ಅಲ್ಲದೆ ಹಣವನ್ನು ಕೂಡ ಬಿಡುಗಡೆ ಮಾಡಿದ್ದೇವೆ.

ಶ್ರೀ ಕೆ. ಬಿ. ಶಾಣಪ್ಪ.—ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಏನು ಸರ್ವೆ ಮಾಡಿದ್ದೀರಿ ಎಷ್ಟು ಕ್ರಾಪ್ ಲಾಸ್ ಆಗಿದೆ, ಎಷ್ಟು ಮನೆ ಬಿದ್ದಿವೆ, ಅವರಿಗೆಲ್ಲ ಏನೇನು ಪರಿಹಾರ ಕೊಟ್ಟಿದ್ದೀರಿ?

ಶ್ರೀ ಧರ್ಮಸಿಂಗ್.—ಉಜನಿ ಡ್ಯಾಂನಿಂದ ನೀರನ್ನು ಬಿಟ್ಟಿದ್ದಕ್ಕೆ ಆಗಿಲ್ಲ ಎಂಬುದು ಸತ್ಯಕ್ಕೆ ದೂರವಾದ ಮಾತು. ಅಲ್ಲಿನ ಕೆರೆ ೪೫೦೦ ಮೀಟರ್ ಇದೆ. ಆಗ ೪.೪ ಮೀಟರ್ ನೀರು ಬಂದಿತ್ತು ಉಜಿನಿಯಲ್ಲಿ ಹೆವಿ ರೈನ್ಸ್‌ನಿಂದ ಜಮೀನುಗಳು ಮುಳುಗಿದ್ದವು. ೨೦ ಸಾವಿರ ಎಕರೆ ಜಮೀನು ನನ್ನ ತಾಲ್ಲೂಕಿನಲ್ಲಿ ಮುಳುಗಿದೆ. ಉಜಿನಿ ಡ್ಯಾಂನಲ್ಲಿ ನೀರು ಬಿಟ್ಟ ಮೇಲೆ ಹೆಚ್ಚಿನ ನೀರು ಬಂದು ಗುಲ್ಬರ್ಗಾ ಜಿಲ್ಲೆಯ ಶಹಬಾದ್‌ನಲ್ಲಿರತಕ್ಕ ೨೦ ಹಳ್ಳಿಗಳು ಜೇವರ್ಗಿ, ಯಾದಗಿರಿ ಈ ಎಲ್ಲಾ ಕಡೆ ಒಂದು ಲಕ್ಷದ ೨೬ ಸಾವಿರ ಎಕರೆ ಜಮೀನಿಗೆ ಡ್ಯಾಮೇಜ್ ಆಗಿದೆ. ಹೆಚ್ಚುವರಿ ಮಳೆಯಿಂದ ಗುಲ್ಬರ್ಗ ಜಿಲ್ಲೆಯಲ್ಲಿ ೬ ಲಕ್ಷ ಹೆಕ್ಟೇರ್ ಏನು ಬಿತ್ತಿದ್ದಾರೆ ಅದೆಲ್ಲ ಹೋಗಿದೆ. ಈಗಾಗಲೇ ಜಿಲ್ಲಾ ಪರಿಷತ್ತಿನವರು ೫೨ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದಾರೆ. ಡೆಪ್ಯೂಟಿ ಕಮೀಷನರ್ ಪುತ್ತು ಬಿಡಿಒ ಜತೆ ಮಾತನಾಡಿದಾಗ ಇಲ್ಲಿಯವರೆಗೆ ಒಂದು ಹಣ ಬಿಡುಗಡೆಯಾಗಿಲ್ಲವೆಂದು ಕೇಳಿದ್ದೇನೆ. ಗುಲ್ಬರ್ಗ ಜಿಲ್ಲೆಯಲ್ಲಿ ೧೨೦೦ ಮನೆಗಳು ಬಿದ್ದು ಹೋಗಿವೆ. ಜೇವರ್ಗಿಯಲ್ಲಿ ೨ ಕೋಟಿ ೮ ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ತಹಶೀಲ್ದಾರರು ಜಿಲ್ಲಾಧಿಕಾರಿಗಳಿಗೆ ರಿಪೋರ್ಟ್ ಕೊಟ್ಟಿದ್ದಾರೆ. ತಾವು ಕೇಂದ್ರಕ್ಕೆ ಮನವಿ ಕೊಟ್ಟಿರುವುದಾಗಿ ಹೇಳಿದಿರಿ. ನೀವು ಕೇಳಿರತಕ್ಕ ೭೯ ಕೋಟಿ ರೂಪಾಯಿಗಳಲ್ಲಿ ಬೆಂಗಳೂರು ನಗರದಲ್ಲಿ ೬೦ ಲಕ್ಷ ಜನರ ಪೈಕಿ ತೊಂದರೆಗೊಳಗಾಗಿರುವ ಸುಮಾರು ಹತ್ತು ಲಕ್ಷ ಜನರಿಗೆ ೪೨ ಕೋಟಿ ರೂಪಾಯಿಗಳನ್ನು ಪ್ರೊಪೋಸ್ ಮಾಡಿದ್ದೀರಿ. ಮೂರೂವರೆ ಕೋಟಿ ಜನರು ಹಳ್ಳಿಯಲ್ಲಿ ಇದ್ದಾರೆ. ಅವರಿಗೆ ಕೇಳಿರುವುದು ಕೇವಲ ೪೦ ಕೋಟಿ ರೂಪಾಯಿಗಳು ನೀವು ಜನಸಂಖ್ಯೆಯ ಆಧಾರದ ಮೇಲೆ ಲೆಕ್ಕ ಹಾಕಿಲ್ಲ, ಅಧಿಕಾರಿಗಳೊಡನೆ ಸಮಾಲೋಚನೆ ಮಾಡಿ ಮಾಡಿರುವುದು. ಮೆಮೋರಾಂಡಂನ್ನು ಕೂಡ ವಾಸ್ತವಿಕವಾಗಿ ಜನರಿಗೆ ಸಹಾಯ ಮಾಡತಕ್ಕ ರೀತಿಯಲ್ಲಿ ಮಾಡಿಲ್ಲ. ಸರ್ಕಾರ ಈ ದಿಸೆಯಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿಲ್ಲ. ಇವತ್ತು ನದಿ ದಂಡೆಯಲ್ಲಿರತಕ್ಕ ಪ್ರದೇಶಕ್ಕೆ ಪರಿಹಾರಾರ್ಥವಾಗಿ ೨ಕೋಟಿ ೮ ಲಕ್ಷ ರೂಪಾಯಿ ದುಡ್ಡು ಬೇಕಾಗಿದೆ. ೬೭ ಸಾವಿರ ಎಕರೆ ಬಿತ್ತನೆಯಾದದ್ದು ಹಾಳಾಗಿದೆ, ೩೦ ಸಾವಿರ ಎಕರೆ ಹೊಳೆ ದಂಡೆ ಪ್ರದೇಶದಲ್ಲಿ ಇರತಕ್ಕದ್ದಕ್ಕೆ ಮರಳು ಶೇಖರಣೆಯಾಗಿದೆ. ಇದಕ್ಕೆ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ. ಗಮನ ಸೆಳೆಯುವ ಸೂಚನೆ ಮೂಲಕ ಕೇಳಿದಾಗ ಅಧಿಕಾರಿಗಳ ಜೊತೆ ಸಂಪರ್ಕ ನಡೆಸಿ ಏನಾಗಿದೆ ಎಂಬ ವಿವರವನ್ನು ಕೊಡಬಹುದಾಗಿತ್ತು. ಈಗ ಇವರು ವಿವರವಾದ ಉತ್ತರವನ್ನು ಕೊಟ್ಟಿಲ್ಲ. ರೂರಲ್ ಡೆವಲಪ್‌ಮೆಂಟ್ ಬಗ್ಗೆ ತಾವೇ ಉಸ್ತುವಾರಿ ವಹಿಸಬೇಕು. ನಾವು ಶಾಸಕರು ಎಲ್ಲಾ ಕಡೆ ಇರುತ್ತೇವೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಏನಾಗಿದೆ ಎಂಬುದನ್ನು ನೋಡಿ. ಅಧಿಕಾರಿಗಳ ಸಭೆಯನ್ನು ಕರೆಯಿರಿ ಮತ್ತು ನಮ್ಮ ಜೊತೆಯಲ್ಲೂ ಬನ್ನಿ ಇದರ ಬಗ್ಗೆ ವಿಚಾರ ಮಾಡಿ ಎಲ್ಲಾ ಜನರಿಗೆ ತೊಂದರೆ ಆಗದ ರೀತಿಯಲ್ಲಿ ಆದ್ಯ ಗಮನ ಕೊಟ್ಟು ಹಣ ನೀಡುತ್ತೇವೆಂದು ಸ್ಪಷ್ಟವಾಗಿ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಆರ್. ವಿ. ದೇಶಪಾಂಡೆ.—ನಾವು ೭೯ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಕೇಳಿದ್ದೇವೆ. ಅದರಲ್ಲಿ ೪೦ ಕೋಟಿ ರೂಪಾಯಿ ಬೆಂಗಳೂರು ನಗರಕ್ಕೆ ನಿಜ. ನಾವು ಕೇಂದ್ರ ಸರ್ಕಾರದಿಂದ ಫ್ಲಡ್ ಅಫೆಕ್ಟ್ ಸಲುವಾಗಿ ಹಣ ಕೇಳಬೇಕಾದರೆ ಕಾಯಿದೆ ಕಾನೂನು ಪ್ರಕಾರ ಕೇಳಬೇಕಾಗುತ್ತದೆ. ಸುಮ್ಮನೆ ಎರಡುನೂರು ಇಲ್ಲವೇ ೩ ನೂರು ಕೋಟಿ ರೂಪಾಯಿಗಳನ್ನು ಕೊಡಿ ಎಂದರೆ ಕೊಡುವುದಿಲ್ಲ. ಒಟ್ಟು ೭೯ ಕೋಟಿ ರೂಪಾಯಿಗಳನ್ನು ಕೇಳಿದ್ದರೆ, ಅದರಲ್ಲಿ ಮುಂಗಡವಾಗಿ ೨೫ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದೇವೆ. ಅದು ಇನ್ನೂ ಬಂದಿಲ್ಲ. ನಾನು ೧೯ಕ್ಕೆ ಡೆಲ್ಲಿಗೆ ಹೋಗಿ...

ಶ್ರೀ ಧರ್ಮಸಿಂಗ್.—ಹೋಗುವುದಕ್ಕೆ ಮುಂಚೆ ರಿಪೋರ್ಟ್ ಕೊಡಿ. ಜಿಲ್ಲಾ ಪರಿಷತ್ತಿನವರು ೫೨ ಕೋಟಿ ರೂಪಾಯಿ ಬೇಕೆಂದು ಹೇಳಿದ್ದಾರೆ.

(ಶ್ರೀ ಶಾಣಪ್ಪನವರು ಮಾತನಾಡಲು ನಿಂತರು)

ಅಧ್ಯಕ್ಷರು.—ಶಾಣಪ್ಪನವರೇ ಅವರು ಉತ್ತರಿಸಲಿ, ಆಮೇಲೆ ಏನಿದ್ದರೂ ಹೇಳಿ

ಶ್ರೀ ಆರ್. ವಿ ದೇಶಪಾಂಡೆ.—ಮೊನ್ನೆ ೨ ೩ ದಿವಸಗಳ ಹಿಂದೆ ಫ್ಲಡ್ ಬಗ್ಗೆ ಚರ್ಚೆ ಮಾಡಿದಾಗ ಈ ಸದನದ ಮಾನ್ಯ ಸದಸ್ಯರು ಹೇಳಿದರು, ಅದೇನೆಂದರೆ, ಕೇಂದ್ರ ಸರ್ಕಾರಕ್ಕೆ ಏನೊಂದು ಮೆಮೊರಾಂಡಂನ್ನು ಕೊಟ್ಟಿದ್ದೀರಿ, ಅದನ್ನು ತಯಾರು ಮಾಡುವಾಗ ನಮ್ಮ ಜೊತೆ ಸಮಾಲೋಚನೆ

ಮಾಡಿಲ್ಲ. ಎಂ.ಎಲ್.ಎ. ಹಾಗೂ ಎಂ.ಪಿ.ಗಳ ಜೊತೆ ಸಮಾಲೋಚನೆ ಮಾಡಿಲ್ಲ ಎಂಬ ದೂರನ್ನು ಮಾಡಿದರು. ಮೆಮೊರಾಂಡಮ್ ಸರಿಯಾಗಿ ತಯಾರು ಮಾಡಿಲ್ಲ ಎಂಬ ದೂರನ್ನೂ ಕೂಡ ಮಾಡಿದರು. ಆ ಬಗ್ಗೆ ತಕ್ಷಣವೇ ಜಿಲ್ಲಾಪರಿಷತ್ತಿನ ಮುಖ್ಯಕಾರ್ಯದರ್ಶಿಗಳಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಟೆಲಿಕ್ಸ್ ಮೆಸೇಜನ್ನು ಕಳುಹಿಸಿದ್ದೇನೆ. ಆದೇನೆಂದರೆ ಈಗಾಗಲೇ ೭೯ ಕೋಟಿ ರೂಪಾಯಿಗಳ ಮೆಮೊರಾಂಡಂನ್ನು ಕೊಡುವಂತಹ ಸಮಯದಲ್ಲಿ ಒಂದು ವೇಳೆ ಯಾವುದಾದರು ಕೃಷಿ ಭೂಮಿಗೆ ತೊಂದರೆಯಾಗಿರುವಂತಹದು ಪ್ರಾಪರ್ಟಿಗೆ ತೊಂದರೆಯಾಗಿರುವಂತಹದ್ದು ಬಿಟ್ಟು ಹೋಗಿದ್ದರೆ, ಆ ಬಗ್ಗೆ ಸ್ಥಳೀಯ ಎಂ ಎಲ್.ಎ.ಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಆ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಕೊಡಿ ಅಂತ ಕೇಳಿದ್ದೇವೆ ಅಂದರೆ ಸಪ್ಲಿಮೆಂಟರಿ ಮೆಮೊರಾಂಡಂನ್ನು ಸಬ್‌ಮಿಟ್ ಮಾಡುವುದಕ್ಕೆ ಸಹಾಯವಾಗುತ್ತದೆಂಬ ಉದ್ದೇಶದಿಂದ. ಗುಲ್ಬರ್ಗ ಜಿಲ್ಲೆಯಲ್ಲಿ ಜವಾರ್-೪,೫೨೦ ಹೆಕ್ಟೇರ್ಸ್‌ಗೆ ತೊಂದರೆಯಾಗಿದೆ ಆದೇ ರೀತಿ ಬಾಜ್ರಾ-೫೫,೬೬೬ ಹೆಕ್ಟೇರ್ಸ್‌ಗೆ ತೊಂದರೆಯಾಗಿದೆ. ಆದೇ ರೀತಿ ಮೈಜ್-೬೬೮ ಹೆಕ್ಟೇರ್ಸ್‌ಗೆ ತೊಂದರೆಯಾಗಿದೆ, ನಂತರ ಪಿಲ್ಸೆಟ್ಸ್-೧೧,೪೧೬ ಹೆಕ್ಟೇರ್ಸ್‌ಗೆ ತೊಂದರೆಯಾಗಿದೆ ಹೀಗೆ ಒಟ್ಟು ೩,೦೮,೧೭೦ ಹೆಕ್ಟೇರ್ಸ್‌ನಲ್ಲಿ ತೊಂದರೆಯಾಗಿದೆ ಎಂಬುದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದೇವೆ.

SRI DHARMASINGH.—What is the sowing area.

ಶ್ರೀ ಆರ್. ವಿ. ದೇಶಪಾಂಡೆ.—ಬಿತ್ತನೆ ಮಾಡಿರತಕ್ಕಂತಹ ಒಟ್ಟು ಏರಿಯಾ ೬,೧೮,೬೭೭ ಹೆಕ್ಟೇರ್ಸ್‌ಗಳು. ಗುಲ್ಬರ್ಗ ಜಿಲ್ಲೆಗೆ ಮೊನ್ನೆ ತಕ್ಷಣ ಯಾರಿಗಾದರೂ ಲೈಫ್ ಲಾಸಾಗಿದ್ದರೆ ತೊಂದರೆಯಾಗಿದ್ದರೆ ಅಂತಹವರಿಗೆ ಪರಿಹಾರ ಕೊಡುವ ಸಲುವಾಗಿ ೨ ಲಕ್ಷ ರೂಪಾಯಿಗಳನ್ನು ರಿಲೀಜ್ ಮಾಡಿದ್ದೇವೆ.

ಶ್ರೀ ಧರ್ಮಸಿಂಗ್.—೬ ಲಕ್ಷ ಹೆಕ್ಟಾರ್ಸ್ ಜಮೀನಿಗೆ ಹಾನಿಯಾಗಿದೆ. ಈಗ ೨ ಲಕ್ಷ ರೂಪಾಯಿಗಳನ್ನು ರಿಲೀಜ್ ಮಾಡಿದರೆ ಏನಾಗುತ್ತದೆ? It is eye-wash.

ಶ್ರೀ ಆರ್. ವಿ. ದೇಶಪಾಂಡೆ.—ನಮ್ಮ ಕಡೆ ಇದ್ದ ೩ ಕೋಟಿ ರೂಪಾಯಿಗಳನ್ನು ಈ ಒಂದು ಫ್ಲಡ್ ಬಗ್ಗೆ ಖರ್ಚು ಮಾಡಿದ್ದೇವೆ. ಕೇಂದ್ರ ಸರ್ಕಾರಕ್ಕೆ ಪಣವನ್ನು ಕೇಳಿದ್ದೇವೆ. ಅವರು ಇನ್ನೂ ಕೊಟ್ಟಿಲ್ಲ. ಆದರೂ ನಾವು ಕೆಲಸವನ್ನು ನಿಲ್ಲಿಸಿಲ್ಲ ಜಿಲ್ಲಾಪರಿಷತ್ತಿಗೂ ಹಾಗೂ ಜಿಲ್ಲಾಧಿಕಾರಿಗಳಿಗೂ ಆದೇಶವನ್ನು ಕೊಟ್ಟಿದ್ದೇವೆ. ವಾರ್ ಫುಟ್ಟಿಂಗ್ ರೀತಿಯಲ್ಲಿ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ.

ಶ್ರೀ ಆರ್. ರಾಮಯ್ಯ.—ಜಿಲ್ಲಾ ಪರಿಷತ್ತಿಗೆ ದುಡ್ಡು ಎಲ್ಲಿಂದ ಬರುತ್ತದೆ. ಪ್ಲಾನಿಂಗ್ ಪ್ರೋಗ್ರಾಂನಲ್ಲಿ ಎಷ್ಟು ಬೇಕೋ ಅಷ್ಟನ್ನೇ ಕೊಟ್ಟಿದ್ದೀರಿ.

SRI K. B. SHANAPPA,—You are giving the records given by the Officials. There is no money at all in Gulbarga.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈಗ ಇಡೀ ರಾಜ್ಯದಲ್ಲಿ ಮಹಾಪೂರದಿಂದ ಅಥವಾ ಅತೀವೃಷ್ಟಿಯಿಂದ ಆಗಿರತಕ್ಕ ನಷ್ಟ ಏನು ಇದೆ ಆ ವಿಷಯ ಬೇರೆ. ಈಗ ಅವರು ಎತ್ತಿರತಕ್ಕಂತಹದ್ದು ಏನೆಂದರೆ, ಮಹಾರಾಷ್ಟ್ರದ ಉಜ್ಜನಿ ಅಣೆಕಟ್ಟಿನಿಂದ ಹೆಚ್ಚು ನೀರನ್ನು ಬಿಟ್ಟಿದ್ದರಿಂದ ಅಲ್ಲಿ ನದಿಯ ಪಕ್ಕದಲ್ಲಿರತಕ್ಕ ಹಳ್ಳಿಗಳ ರೈತರಿಗೆ ತೊಂದರೆಯಾಗಿರುವ ಬಗ್ಗೆ ನೇರವಾದ ಪ್ರಶ್ನೆಯನ್ನು ಕೇಳಿದ್ದಾರೆ. ಇದನ್ನು ನಾವು ಅಲ್ಲೇ ತಡೆಯುವುದಕ್ಕಾಗುವುದಿಲ್ಲ. ನಮ್ಮ ಕೆ.ಆರ್.ಎಸ್.ನಲ್ಲೂ ನೀರು ಹೆಚ್ಚು ಬಂದರೆ ಹೆಚ್ಚುವರಿ ನೀರನ್ನು ಡ್ಯಾಂನಿಂದ ಹೊರಕ್ಕೆ ಬಿಡಲೇಬೇಕಾಗುತ್ತದೆ. ಇಲ್ಲದಿದ್ದರೆ ಡ್ಯಾಂ ಉಳಿಯುವುದಿಲ್ಲ. ಆಗ ನಾವು ಏನು ಮಾಡುತ್ತೇವೆಂದರೆ ತಮಿಳುನಾಡಿಗೆ ವೈರ್‌ಲೆಸ್ ಮೆಸೇಜ್ ಮೂಲಕ ಹೇಳುತ್ತೇವೆ. ಆದೇ ರೀತಿ ನದಿಯ ಅಕ್ಕಪಕ್ಕದ ಜನರಿಗೂ ವೈರ್‌ಲೆಸ್ ಮೂಲಕ ತಿಳಿಸುತ್ತೇವೆ. ನಮ್ಮಲ್ಲಿ ಹೆಚ್ಚು ನೀರು ಬರದಿದ್ದರೂ ಮಹಾರಾಷ್ಟ್ರದಲ್ಲಿ ಹೆಚ್ಚು ಮಳೆಯಾದರೆ they cannot store excess water. ಇಲ್ಲದಿದ್ದರೆ ಅವರ ಡ್ಯಾಂ ಉಳಿಯುವುದಿಲ್ಲ. ಆದರಿಂದ ಹೆಚ್ಚುವರಿ ನೀರನ್ನು ಹೊರಗೆ ಬಿಡುತ್ತಾರೆ, ಇದರಿಂದ ೨೦ ಸಾವಿರ ಎಕರೆಯೋ, ೧ ೨೬,೦೦೦ ಎಕರೆಯಲ್ಲಿರತಕ್ಕ ಬೆಳೆ ಹಾಳಾಗಿದ್ದರೆ, ನೀರು ಎಷ್ಟು ದಿವಸ ಹರಿದಿದೆ, ಎಷ್ಟು ನಷ್ಟವಾಗಿದೆ ಎಂಬುದರ

ಬಗ್ಗೆ ಒಂದು ಕಾಂಪ್ರಹೆನ್ಸಿವ್ ಆಗಿ ವರದಿಯನ್ನು ತರಿಸಿಕೊಂಡು ೧೦ ಲಕ್ಷ ನಷ್ಟ ಆಗಿದೆಯೋ, ೧೫ ಲಕ್ಷ ನಷ್ಟ ಆಗಿದೆಯೋ ಅಥವಾ ೧ ಕೋಟಿ ನಷ್ಟ ಆಗಿದೆಯೋ ಅಥವಾ ೨೦ ಕೋಟಿ ಆಗಿದೆಯೇ ಎಂಬುದನ್ನು ನೋಡಿ ಅಷ್ಟನ್ನು ಕಟ್ಟಿಕೊಡಬೇಕಾಗುತ್ತದೆ. ಅದಕ್ಕೆ ನಿಯಮಾವಳಿಗಳು ಇವೆ. ಇದನ್ನು ನೀರಾವರಿ ಇಲಾಖೆಗೆ ಶಿಫ್ಟ್ ಮಾಡಿ, ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಶಿಫ್ಟ್ ಮಾಡಿ ಎನ್ನುತಕ್ಕ ಪ್ರಶ್ನೆ ಅಲ್ಲ. ಸರ್ಕಾರ ಯಾವುದೇ ಕೆಲಸ ಮಾಡುವಾಗ ಅದಕ್ಕೆ ಕೆಲವು ಜವಾಬ್ದಾರಿಗಳಿವೆ. ಯಾವ ಇಲಾಖೆಯ ಮಂತ್ರಿಗಳು ಉತ್ತರ ಹೇಳಿದರೂ ಸರ್ಕಾರ ಅದರ ಬಗ್ಗೆ ಗಮನ ಹರಿಸುತ್ತದೆ. ಬೀದರ್, ಗುಲ್ಬರ್ಗ, ಜಿಲ್ಲೆಗಳಲ್ಲಿ ಅಥವಾ ಇಡೀ ಜಿಲ್ಲೆಯಲ್ಲಿ ಜನತಾ ಮನೆಗಳು ಬಿದ್ದು ಹೋಗಿದ್ದರೆ, ಅವನ್ನೆಲ್ಲಾ ಲೆಕ್ಕ ಹಾಕಿ ಹೇಳತಕ್ಕಂತಹದ್ದು ಬೇರೆ. That is a different issue. ಬಿದ್ದು ಹೋದಂತಹ ಮನೆಗಳನ್ನು ಕಟ್ಟಿಸಿಕೊಡಬೇಕಾಗುತ್ತದೆ, ಆದರೆ ಅವರ ಗಮನ ಸೆಳೆಯುವ ಮುಖ್ಯ ಉದ್ದೇಶ ಉಜ್ಜನಿ ಡ್ಯಾಂನಿಂದ ನೀರನ್ನು ಹೆಚ್ಚು ಬಿಟ್ಟಿದ್ದರಿಂದ ಆಜು-ಬಾಜುವಿನಲ್ಲಿದ್ದ ಹಳ್ಳಿಯ ರೈತರಿಗೆ ಹಾಗೂ ಅವರ ಜಮೀನಿನಲ್ಲಿ ಬೆಳೆದಂತಹ ಬೆಳೆಗೆ ಹಾನಿಯಾಗಿರುವುದರಿಂದ ಪರಿಹಾರವನ್ನು ಕೇಳುತ್ತಿದ್ದಾರೆ. ಆದಕ್ಕೆ ಅಲ್ಲಿನ ಡಿ.ಸಿ. ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳಿಂದ ಕಾಂಪ್ರಹೆನ್ಸಿವ್ ವರದಿಯನ್ನು ತರಿಸುತ್ತೇವೆ. ಅದಕ್ಕೆ ಏನು ಪರಿಹಾರ ಕೊಡಬೇಕೋ ಅದನ್ನು ಕೊಡುತ್ತೇವೆ. ಕೇಂದ್ರ ಸರ್ಕಾರ ಕೊಡುವುದು ಆಮೇಲೆ. ಅದಂ ಸೆಕೆಂಡರಿ ಇಶ್ಯೂ. ಆ ನದಿ ದಂಡೆಯಲ್ಲಿ ಎಷ್ಟು ಅಪಾಯವಾಗಿದೆ, ಹಾನಿಯಾಗಿದೆ ಎಂದು ವರದಿಯನ್ನು ನೋಡಿ ಪರಿಹಾರವನ್ನು ಕೊಡುತ್ತೇವೆ.

ಖ) ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಅಫಿಶಿಯಲ್ ಮೆಮೊರಾಂಡಮ್ ಹೊರಡಿಸಿ ಗೇಣಿ ಜಮೀನಿನಲ್ಲಿರುವ ಮರಗಳು ಅರಣ್ಯ ಇಲಾಖೆಗೆ ಸೇರಿವೆ ಎಂದು ರೈತರು ಬೆಳೆಸಿದ ಮರಗಳನ್ನು ಅವರ ಸ್ವಂತ ಉಪಯೋಗಕ್ಕೆ ಸಿಗದಂತೆ ಮಾಡಿರುವ ಬಗ್ಗೆ

† ಶ್ರೀ ಆರ್. ಎನ್. ನಾಯಕ್ —ಅಧ್ಯಕ್ಷರೇ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ದಿನಾಂಕ ೬-೪-೧೯೮೮ರಂದು ನಂ. ೬ ಎಂ.ಟಿ.ಎಸ್.ಸಿ ಆರ್. ೨೨/೮೭-೮೮ರ ಪ್ರಕಾರ ಅಫಿಶಿಯಲ್ ಮೆಮೊರಾಂಡಮ್ ಹೊರಡಿಸಿ ಗೇಣಿ ಜಮೀನಿನಲ್ಲಿರುವ ಮರಗಳು ಅರಣ್ಯ ಇಲಾಖೆಗೆ ಸೇರಿವೆ ಎಂದು ರೈತರು ಬೆಳೆಸಿದ ಮರಗಳನ್ನು ಅವರ ಸ್ವಂತ ಉಪಯೋಗಕ್ಕೆ ಸಿಗದಂತೆ ಮಾಡಿರುವ ಬಗ್ಗೆ ಮಾನ್ಯ ಕೃಷಿ ಹಾಗೂ ಅರಣ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ. ಅಧ್ಯಕ್ಷರೇ, ಇದಕ್ಕೆ ಉತ್ತರ ಹೇಳುವವರು ಯಾರು ಇದ್ದಾರೆ?

ಅಧ್ಯಕ್ಷರು. —ನಾಯಕ್ ಅವರ ಸೂಚನೆಗೆ ಉತ್ತರ ಕೊಡುವವರು ಯಾರು?

ಶ್ರೀ ಆರ್. ವಿ. ದೇಶಪಾಂಡೆ. —ಅವರಿಗೆ ಬೇಕಾದರೆ ನಾನು ಉತ್ತರ ಹೇಳುತ್ತೇನೆ. ಏತಕ್ಕೆಂದರೆ ಅವರು ನನ್ನ ಹತ್ತಿರ ಚರ್ಚೆ ಮಾಡಿದ್ದಾರೆ. ಅದಕ್ಕೋಸ್ಕರ ನನಗೆ ಗೊತ್ತಿದೆ. ೧-೩-೧೯೭೪ರ ಭೂ ಸುಧಾರಣಾ ಕಾಯ್ದೆ ಜಾರಿಗೆ ಬಂದ ನಂತರ ರೈತರು ಭೂಮಾಲೀಕರಾಗಿದ್ದಾರೆ, ಆದರೆ ಈ ಭೂ ಮಾಲೀಕರಾಗುವಾಗ ಅಲ್ಲಿ ಇದ್ದ ಗಿಡ ಮರ ಏನು ಇದೆ ಅವು ಸರ್ಕಾರದ ಮಾಲೀಕತ್ವದ್ದೇ ಆಗಿವೆ. ಇವತ್ತು ಏಷ್ಟೋ ಕಾಂಟ್ರ್ಯಾಕ್ಟರ್ಸ್ ಏನು ಮಾಡುತ್ತಿದ್ದಾರೆಂದರೆ. ಈ ರೈತರಿಂದ ಗಿಡವನ್ನು ಖರೀದಿ ಮಾಡಿ ಅರಣ್ಯ ಇಲಾಖೆಗೆ ಬಂದು ಇವನ್ನು ಕಟ್ ಮಾಡುವುದಕ್ಕೆ ಪರ್ಮಿಷನ್ ಕೊಡಿ ಎಂದು ಹೇಳುತ್ತಿದ್ದಾರೆ. ಆ ಪ್ರಕಾರ ಒಳ ರಿಂದ ನಡೀತಾ ಬರುತ್ತಿತ್ತು. ೧೯೮೬ನೇ ಇಸವಿಯ ನವೆಂಬರ್-ಡಿಸೆಂಬರ್ ತಿಂಗಳಲ್ಲಿ ಇದು ಸರ್ಕಾರದ ಗಮನಕ್ಕೆ ಬಂದು ೧-೩-೭೪ರಲ್ಲಿ ಏನು ಭೂಸುಧಾರಣ ಕಾಯ್ದೆ ಬಂತು, ಅದರ ಳಿಗೆ ಎ ಕಲಂ ಪ್ರಕಾರ ರೈತರು ಭೂಮಿಗೆ ಮಾಲೀಕರು ಆಗುತ್ತಾರೆಯೇ ವಿನಃ ಅಲ್ಲಿ ಇದ್ದ ಮರಗಳು ಮಾತ್ರ ಸರ್ಕಾರದ ಮಾಲೀಕತ್ವಕ್ಕೆ ಸೇರಿವೆ. ಇದರಿಂದ ಅರಣ್ಯ ಇಲಾಖೆಯವರು ಒಂದು ಆರ್ಡ್ಲ್ ಹೊರಡಿಸಿ ಟ್ರೀ ಗೈಡ್ಸ್ ಸರ್ಕಾರದ್ದು, ಅದನ್ನು ಯಾವುದೇ ರೀತಿಯಿಂದ ಮೂರಾಟ ಮಾಡುವುದಕ್ಕೆ ರೈತರಿಗೆ ಪರವಾನಿಗೆ ಕೊಡಬಾರದು ಎಂಬ ಆದೇಶವನ್ನು ಕೊಟ್ಟಿದ್ದಾರೆ ಆದರೆ ಮಾನ್ಯ ಸದಸ್ಯರು ಕೇಳುತ್ತಿರುವುದು ಏನು? ಈ ಮಾಲ್ಕಿ ಕಾಂಟ್ರ್ಯಾಕ್ಟರ್ಸ್ ಯಾರು ಖರೀದಿ ಮಾಡಿಕೊಂಡಿದ್ದಾರೆ, ಅವರಿಗೆ ಪರವಾನಿಗೆ ಕೊಡಿ ಎಂದು ಹೇಳುತ್ತಿದ್ದಾರೆ. ಅರಣ್ಯ ಸಚಿವರು ಒಂದು